

# ಸ್ವಾಮಿ ವಿವೇಕಾನಂದರು ನಿರೂಪಿಸಿದ ನೀತಿಕಥೆಗಳು

ಡಾ. ಕೆ. ಅನಂತರಾಮು

## ಅಳಿಲು ಭಕ್ತಿ ಮಳಲು ಸೇವೆ

ಸ್ವಾಮಿ ವಿವೇಕಾನಂದರು ಭರತಖಂಡದಲ್ಲಿ "ಆಮೂಲಾಗ್ರ ಸುಧಾರಣೆ"ಯಾಗಬೇಕು ಎಂದು ಆಶಿಸುತ್ತಿದ್ದರು. ಚೂರುಪಾರು ಸುಧಾರಣೆಗಳಿಂದ ಏನೂ ಪ್ರಯೋಜನವಾಗುವುದಿಲ್ಲ ಎಂದು ಅವರು ಹೇಳುತ್ತಿದ್ದರು. ಹಾಗೆ ಆಮೂಲಾಗ್ರ ಸುಧಾರಣೆಗಾಗಿ ಪ್ರಯತ್ನಿಸುವಾಗಲೂ ದೇವರ ಸ್ಥಾನದಲ್ಲಿ ನಿಂತು ಸಮಾಜವನ್ನು ಕುರಿತು "ನೀನು ಇದೇ ದಿಕ್ಕಿನಲ್ಲಿ ಹೀಗೆಯೇ ಚಲಿಸಬೇಕು" ಎಂದು ಆಜ್ಞೆ ಮಾಡುವುದು ಸಾಧ್ಯವಿಲ್ಲ. ಹಾಗೆ ಪ್ರಭುವಿನಂತೆ ಆಜ್ಞೆ ಮಾಡಲೂಬಾರದು. ಎನಗಿಂತ ಕಿರಿಯರಿಲ್ಲ ಎಂಬ ಭಾವನೆಯಿಂದ, ರಾಮಾಯಣ ಕಾಲದ ಅಳಿಲಿನಂತೆ, ಸೇವಾ ತತ್ಪರರಾಗಿರಬೇಕು ಎಂದು ಹೇಳುತ್ತ ಆ ಅಳಿಲಿನ ಕಥೆಯನ್ನು ಅತ್ಯಂತ ಸಂಗ್ರಹವಾಗಿ ಸೂಚಿಸಿ ಮುನ್ನಡೆದಿದ್ದಾರೆ.

ಶ್ರೀರಾಮನು ಸಮುದ್ರಕ್ಕೆ ಸೇತುವೆ ಕಟ್ಟುತ್ತಿದ್ದ ಕಾಲದಲ್ಲಿ ಕಪಿವೀರರೂ, ಜಾಂಬವವೀರರೂ ಅಹೋರಾತ್ರಿ ಬಂಡೆಗಲ್ಲುಗಳನ್ನೂ ಹೆಮ್ಮರಗಳನ್ನೂ ತಂದೊಟ್ಟುತ್ತಾ ಕಾರ್ಯತತ್ಪರರಾಗಿದ್ದರು. ಪುಟ್ಟ ಪ್ರಾಣಿಗಳಾದ ಅಳಿಲುಗಳು ಅದನ್ನು ಕುತೂಹಲದಿಂದ ನಿಟ್ಟಿಸುತ್ತಿದ್ದವು. "ಈ ಸೇತುಬಂಧನಕ್ಕೆ ಸಂಬಂಧಿಸಿದಂತೆ ನಾವೇನು ರಾಮಸೇವೆ ಮಾಡಬಹುದು" ಎಂದು ಅವು ಆಲೋಚಿಸಿದವು. ಆಗ ಅವುಗಳಿಗೆ ಒಂದು ಉಪಾಯ ಹೊಳೆಯಿತು. ಸಮುದ್ರ ಜಲದಲ್ಲಿ ಮುಳುಗಿ ಹೊರಬಂದು ಸಮುದ್ರತೀರದ ಮರಳರಾಶಿಯ ಮೇಲೆ ಚೆನ್ನಾಗಿ ಹೊರಳಾಡುವುದು; ಆಮೇಲೆ ಸಮುದ್ರಕ್ಕೆ ಇಳಿದು, ತಮ್ಮ ಮೈಗಂಟಿದ ಮರಳನ್ನೆಲ್ಲ ಆ ಸಮುದ್ರಜಲದಲ್ಲಿ ಕೊಡಹುವುದು; ಮತ್ತೆ ಮೇಲೆ ಬಂದು ಮರಳರಾಶಿಯ ಮೇಲೆ ಹೊರಳಾಡುವುದು, ಮತ್ತೆ ಸಮುದ್ರಕ್ಕಿಳಿದು ಕೊಡಹುವುದು– ಹೀಗೆಯೇ ಎಡಬಿಡದೆ ಮಾಡತೊಡಗಿದವು. ಕಪಿವೀರರು ಸಮುದ್ರಕ್ಕೆ ಎಸೆಯುತ್ತಿದ್ದ ಬಂಡೆಗಲ್ಲುಗಳ ಬಿರುಕುಗಳ ನಡುವೆ, ತಮ್ಮ ದೇಹಕ್ಕೆ ಅಂಟಿದ ಮರಳು ಶೇಖರಗೊಂಡು, ತನ್ಮೂಲಕ ಸೇತುವೆಯು ಭದ್ರಗೊಳ್ಳಲಿ ಎಂದು ಆ ಅಳಿಲುಗಳು ಹಾಗೆ ಮಾಡತೊಡಗಿದವು.

ಅಳಿಲುಗಳ ಆ ಕೆಲಸವನ್ನು ಕಂಡ ಶ್ರೀರಾಮನು "ಏನು ಮಾಡುತ್ತಿದ್ದೀರಿ ನನ್ನ ಮುದ್ದು ಅಳಿಲುಗಳೇ" ಎಂದು ಕೇಳಿದನು. ಆಗ ಅಳಿಲುಗಳು ತಮ್ಮ ಕಾರ್ಯಯೋಜನೆಯನ್ನು ವಿವರಿಸಿ "ಅಳಿಲು ಭಕ್ತಿ ಮಳಲು ಸೇವೆ ನಮ್ಮದು ತಂದೆ" ಎಂದು ನಮಸ್ಕಾರ ಮಾಡಿದವು. ಅದಕ್ಕೆ ಶ್ರೀರಾಮನು "ಕಪಿವೀರರೂ ಜಾಂಬವವೀರರೂ ಬಂಡೆಗಲ್ಲುಗಳನ್ನೂ, ಹೆಮ್ಮರಗಳನ್ನೂ ಒಂದೇ ಸಮನೆ ತಂದೆಸೆಯುತ್ತಿದ್ದಾರೆ. ನಿಮ್ಮ ಮೇಲೇನಾದರೂ ಬಿದ್ದರೆ ಅಪ್ಪಚ್ಚಿಯಾಗಿಬಿಡುತ್ತೀರಿ, ನಿಮಗೆ ಭಯವಿಲ್ಲವೆ?" ಎಂದು ಕೇಳಿದನು. ಅದಕ್ಕೆ ಅಳಿಲುಗಳು "ಮರಣ ಎಂಬುದೇನು ಎರಡು ಬಾರಿ ಬರುತ್ತದೆಯೆ, ನಿನ್ನ ಕಾರ್ಯಕ್ಕಾಗಿ ನಮ್ಮ ಪ್ರಾಣ ಅರ್ಪಿತವಾಯಿತೆಂದರೆ ನಾವು ಕೃತಾರ್ಥರಾಗುವುದಿಲ್ಲವೆ ತಂದೆ! ನೀನಿರುವಾಗ ನಮಗೇಕೆ ಭಯ?" ಎಂದು ಉತ್ತರಕೊಟ್ಟವು. ಆಗ ಶ್ರೀರಾಮನಿಗಾದ ಸಂಭ್ರಮ ಅಷ್ಟಿಷ್ಟಲ್ಲ. "ನಿಮ್ಮ ಭಕ್ತಿಯನ್ನು ಮೆಚ್ಚಿದ್ದೇನೆ. ನಿಮ್ಮ ಸೇವೆಯನ್ನು ನಾನು ಮನಸಾರೆ ಸ್ವೀಕರಿಸಿದ್ದೇನೆ ಅಳಿಲು



ಗಳೇ" ಎಂದು ಹೇಳುತ್ತ, ಮಮತೆಯಿಂದ ಅವುಗಳ ಬೆನ್ನು ನೇವರಿಸಿದನು. ಅದೇ ಕಾರಣವಾಗಿ ಶ್ರೀರಾಮನ ಕೈ ಬೆರಳುಗಳ ಗುರುತು ಅವನ ಹಣೆಯ ಮೇಲಿನ ನಾಮದಂತೆ, ಅವುಗಳ ಬೆನ್ನ ಮೇಲೆ ಮೂಡಿಕೊಂಡಿತು. ಅಳಿಲುಗಳು ಮಾಡಿದ ರಾಮಸೇವೆಯ ಗುರುತಾಗಿ 'ರಾಮನಾಮ' ಶಾಶ್ವತವಾಗಿ ಉಳಿದುಕೊಂಡಿತು.

ನಮ್ಮ ರಾಷ್ಟ್ರೀಯ ಮಹಾಯಂತ್ರವು ಶತಶತಮಾನಗಳಿಂದ ಕೆಲಸ ಮಾಡುತ್ತಾ ಬಂದಿದೆ. ಸಹಸ್ರಾರು ಸನ್ನಿವೇಶಗಳು ಅದರಲ್ಲಿ ಮಿಲನಗೊಂಡಿವೆ. ಅದರ ಗತಿಯನ್ನು ನಿರ್ಧರಿಸುವುದು ಯಾರಿಂದಲೂ ಸಾಧ್ಯವಿಲ್ಲ. ಸಮಸ್ಯೆಗಳಾದರೋ ಬೇಕಾದಷ್ಟಿವೆ. ಆ ಸಮಸ್ಯೆಗಳಾದರೋ ಹಳೆಯ ಕಾಲದಿಂದ ಇರುವ ವಾತರೋಗದಂತೆ ಜಟಿಲವಾಗಿವೆ. ಹಾಗೆಂದ ಮಾತ್ರಕ್ಕೆ ಧೃತಿಗೆಡಬೇಕಾಗಿಲ್ಲ. ಅವಸರಪಡದೆ ಸಾವಧಾನವಾಗಿ ಕಾರ್ಯೋನ್ಮುಖರಾಗಬೇಕಾಗಿದೆ. ಅಳಿಲುಗಳಂತೆ ಎಡೆಬಿಡದೆ, ವಿನಯದಿಂದ ಕೆಲಸಮಾಡಬೇಕಾಗಿದೆ – ಎಂದು ವಿವೇಕಾನಂದರು ಉಪದೇಶ ನೀಡಿದ್ದಾರೆ.

ಭಗವದ್ಗೀತೆಯ ಒಂದು ಮುಖ

# ಜೀವನವೇ ಒಂದು ಸವಾಲು

ಸ್ವಾಮಿ ಧರ್ಮವ್ರತಾನಂದ

**ಭಗವದ್ಗೀತೆ ಕೇವಲ ಧರ್ಮಗ್ರಂಥವಷ್ಟೇ ಅಲ್ಲ; ಅದು ನಿತ್ಯಜೀವನದಲ್ಲಿ ಅನುಸರಿಸಬೇಕಾದ ಕೆಲವು ಮುಖ್ಯವಾದ ಪ್ರಾಯೋಗಿಕ ರೀತಿನೀತಿಗಳನ್ನೂ ಒಳಗೊಂಡ ಮೌಲಿಕ ಗ್ರಂಥವಾಗಿದೆ. ಈ ವಿಚಾರವನ್ನು ಸಂಕ್ಷಿಪ್ತವಾಗಿ ವಿವರಿಸಿ ವಿಶ್ಲೇಷಿಸಿರುವ ಲೇಖಕರು ಮಂಗಳೂರು ರಾಮಕೃಷ್ಣ ಮಿಷನ್ ಬಾಲಕಾಶ್ರಮದ ಪಾಲಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.**

ಗೀತೆ–ಭಗವದ್ಗೀತೆ, ಒಂದು ಶ್ರೇಷ್ಠವಾದ ಹಾಗೂ ತತ್ತ್ವಪೂರ್ಣವಾದ ಕೃತಿ. ಪ್ರತಿಯೊಬ್ಬರೂ, ಅಂದರೆ ಹಿಂದೂಗಳು ಮಾತ್ರವಲ್ಲದೆ, ಜ್ಞಾನಾರ್ಜನೆಗೆ ಮತ್ತು ಸತ್ಯದ ಅರಿವಿಗಾಗಿ ಆಶಿಸುವ ಪ್ರತಿಯೊಬ್ಬರೂ ಓದಬೇಕಾದ ಗ್ರಂಥವಿದು. ಇಲ್ಲಿ ಯಾವುದೇ ಒಂದು ಮತವನ್ನಾಗಲಿ ಅಥವಾ ಪಂಥವನ್ನಾಗಲಿ ಕುರಿತು ಹೇಳದೆ, 'ಪರಮಸತ್ಯ' ವನ್ನಷ್ಟೇ ಸಾದರಪಡಿಸಲಾಗಿದೆ. ಗೀತೆಯು ಆ ಸತ್ಯವನ್ನು ಜೀವನದಲ್ಲಿ ಅಳವಡಿಸಿಕೊಳ್ಳಲು ಒಂದು ಪ್ರಾಯೋಗಿಕ ವಿಧಾನವನ್ನು ನೀಡುತ್ತದೆ. ಅದು ಮಾನವತೆಯ ಸಾರ್ಥಕ್ಯಕ್ಕೆ ದಾರಿದೀಪವಾಗಿ ನಿಂತಿದೆ.

ಗೀತೆಯು ಹಲವಾರು ವಿಧದಿಂದ, ಉದಾಹರಣೆ ಸಹಿತವಾಗಿ ಜೀವನದ ದುಃಖ–ದುಮ್ಮಾನಗಳನ್ನು ಅರಿತು, ಅದರಿಂದ ಪಾರಾಗಲು ಮಾರ್ಗವನ್ನು ಸೂಚಿಸುತ್ತದೆ. ಅರ್ಜುನನನ್ನು ಉಪಯೋಗಿಸಿಕೊಂಡು, ಅವನ ಮೂಲಕ ಅನೇಕ ಪ್ರಶ್ನೆಗಳನ್ನು ಕೇಳಿಸಿ, ಉತ್ತರ ನೀಡುತ್ತದೆ ಭಗವದ್ಗೀತೆ. ಇಲ್ಲಿ ಶ್ರೀಕೃಷ್ಣ ಪರಿಪೂರ್ಣ ಜೀವನದ ತತ್ತ್ವವನ್ನರಿತ, ಕರ್ತವ್ಯವನ್ನು ಪಾಲಿಸಿದ, ನಿಷ್ಠಾವಂತನಾದ ಹಿರಿಯ ವ್ಯಕ್ತಿ. ಸ್ನೇಹಿತನಾಗಿ, ಶಿಷ್ಯನಾಗಿ ಬಂದಂತಹ ಅರ್ಜುನನಿಗೆ ಜೀವನದ ರಹಸ್ಯವನ್ನು – ಪರಮ ಗುರಿಯನ್ನು ವಿವರಿಸುತ್ತಾನೆ ಕೃಷ್ಣ.

ಅರ್ಜುನನು ತಾನು ಶಿಷ್ಯನಾಗಿ ಬಂದಿದ್ದೇನೆ, ದಾರಿ ತೋರಿಸು ಎನ್ನುವವರೆಗೂ ಮೌನದಿಂದಲೇ ಇರುತ್ತಾನೆ ಶ್ರೀಕೃಷ್ಣ. ಅನಂತರವೇ ತನ್ನ ಅನುಭವದ ನುಡಿಗಳನ್ನು ಹರಿಸಿ **ಹೋರಾಟವೇ ಜೀವನ – ಅದು ಒಂದು ಸವಾಲು** ಎಂದು ಸಾರುತ್ತಾನೆ.

ಸ್ವಾಮಿ ಬ್ರಹ್ಮಾನಂದರನ್ನು ಶಿಷ್ಯನೊಬ್ಬ, 'ಸ್ವಾಮೀಜಿ, ಜೀವನ ಅಂದರೆ ಏನು?' ಎಂದು ಕೇಳಿದಾಗ, ಅವರು ಕೊಟ್ಟ ಉತ್ತರ, ' ಹೋರಾಟ, ಹೋರಾಟ, ಹೋರಾಟ' ಎಂದು. ಇದನ್ನೇ ಸ್ವಾಮಿ ವಿವೇಕಾನಂದರು, 'ತನ್ನನ್ನು ಕೆಳಗೊತ್ತುತ್ತಿರುವ ಪರಿಸ್ಥಿತಿಗಳಲ್ಲಿ ಒಂದು ಜೀವಿಯ ವಿಕಾಸ ಮತ್ತು ಬೆಳವಣಿಗೆಯೇ ಜೀವನ' ಎಂದು ಹೇಳಿದರು. ಅಂದರೆ ತಮಗೆ ವಿರುದ್ಧವಾದ ಘಟನೆಗಳನ್ನು, ಪರಿಸ್ಥಿತಿಗಳನ್ನು ಎದುರಿಸಿ ತಾವು ಬೆಳೆಯಬೇಕು, ಹೋರಾಡಬೇಕು. ಅದೇ ಜೀವನ.

ಜೀವನಧರ್ಮವನ್ನು ಬೋಧಿಸುವ ಗೀತೆ, ಈ ಹೋರಾಟಕ್ಕೆ ಕಾರಣವನ್ನು ನೀಡುತ್ತದೆ. ಅದೇ – ಆಸೆ, ಆಸಕ್ತಿ ಮತ್ತು ಮಮಕಾರ. ಇವುಗಳಿಗೆ ಬಲಿಯಾಗಿ ಮನುಷ್ಯನು ಸ್ವಾರ್ಥಿಯಾಗಿ ಹೋರಾಟದಲ್ಲಿ ಮುಳುಗುತ್ತಾನೆ.

**ಕಾಮ ಏಷ ಕ್ರೋಧ ಏಷ ರಜೋಗುಣ ಸಮುದ್ಭವಃ ।**
**ಮಹಾಶನೋ ಮಹಾಪಾಪ್ಮಾ ವಿದ್ಧ್ಯೇನಮಿಹ ವೈರಿಣಮ್ ॥**
**(೩.೩೭)**

ಇವು ಎಲ್ಲಾ ಪಾಪಗಳಿಗೆ ಮೂಲ, ಹೋರಾಟಕ್ಕೆ ಮೂಲ ಎನ್ನುತ್ತದೆ ಗೀತೆ. 'ನಾನು ದೇಹ, ಮನಸ್ಸು ಮತ್ತು ಬುದ್ಧಿಗಳೇ ಆಗಿದ್ದೇನೆ' ಎಂಬ ಮಾಯೆಯ ತೆರೆ ನಿನ್ನನ್ನು ಮುಚ್ಚಿದೆ. ಅದನ್ನು ಸರಿಸಲು ನಿನಗೆ ಪ್ರಕೃತಿಯು ಸವಾಲನ್ನು ಒಡ್ಡಿದೆ. ಜನ್ಮಜನ್ಮಾಂತರದ ಈ ದೇಹ ಮತ್ತು ಅದರ ಸಮೂಹವೇ ನಾನೆಂಬ ನಮ್ಮ ಈ ಸಂಸ್ಕಾರದ ಬಲವನ್ನು ಮೀರಿ, ಮಾನವತ್ವದಿಂದ ದೈವತ್ವಕ್ಕೆ ಏರು ಎನ್ನುತ್ತದೆ. ಇದಕ್ಕೆ ದೊಡ್ಡ ಹೋರಾಟ ಆವಶ್ಯಕ ಎಂದು ಹೇಳುತ್ತಾ, ಧೈರ್ಯವನ್ನು ತುಂಬಲು ಭಗವಂತನೇ ಆಶೀರ್ವಾದದ ಮೂಲಕ ಸ್ಫೂರ್ತಿಯನ್ನು ತುಂಬುತ್ತಾನೆ:

**ಕ್ಲೈಬ್ಯಂ ಮಾ ಸ್ಮ ಗಮಃ ಪಾರ್ಥ ನೈತತ್ತ್ವಯ್ಯುಪಪದ್ಯತೇ ।**
**ಕ್ಷುದ್ರಂ ಹೃದಯದೌರ್ಬಲ್ಯಂ ತ್ಯಕ್ತ್ವೋತ್ತಿಷ್ಠ ಪರಂತಪ ॥ (೨.೩)**

– ಎಂದು ಹೋರಾಡಲು ಅಪ್ಪಣೆಯನ್ನೂ ಈ ಶ್ಲೋಕದ ಮೂಲಕ ನೀಡುತ್ತಾನೆ.

ಪೂರ್ವಸಂಸ್ಕಾರದ ಬಲದಿಂದ ಉಂಟಾಗುವ ನಾನು ದುಃಖಿ–ಸುಖಿ, ಬಡವ–ಬಲ್ಲಿದ, ಮೇಲು–ಕೀಳು ಎಂಬ ಈ ಭಾವನೆಗಳು ಕೇವಲ ತೋರ್ಪಡಿಕೆ ಮಾತ್ರ; ಅದು ನಿಜವಲ್ಲ. ಈ ರೀತಿಯಾಗಿ ಭಾವಿಸುವುದು, ನರಳುವುದು ಕೇವಲ ಶಿಖಂಡಿತನ. ಈ ಶಿಖಂಡಿತನದ ದೌರ್ಬಲ್ಯವನ್ನು ಬಿಡು. ನೀನು ಈ ಮಾಯೆಯ ಅಡಿಯಾಳಲ್ಲ; ನೀನು ನಿತ್ಯ, ಮುಕ್ತ, ಶಕ್ತ ಆತ್ಮ ಎನ್ನುತ್ತಾನೆ.

ಇಲ್ಲಿ ಗೀತೆಯು ಹೇಳುವ ಮತ್ತೊಂದು ಮಾತೆಂದರೆ "ನೀನು ಕಷ್ಟಗಳನ್ನು–ದುಃಖಗಳನ್ನು ಗೆಲ್ಲಬೇಕಾದರೆ,